ಕರ್ನಾಟಕ ಸರ್ಕಾರ
ಸಮಗ್ರ ಮಕ್ಕಳ ರಕ್ಷಣಾ ಯೋಜನೆ
ಕರ್ನಾಟಕ ರಾಜ್ಯ ಸಮಗ್ರ ಮಕ್ಕಳ ರಕ್ಷಣಾ ಸೊಸೈಟಿ
C/o. ನಿರ್ದೇಶನಾಲಯ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಒಂದನೇ ಮಹಡಿ, ಬಹು ಮಹಡಿಗಳ ಕಟ್ಟಡ,
ಡಾ॥ ಬಿ.ಆರ್. ಅಂಬೇಡ್ಕರ್ ವೀದಿ, ಬೆಂಗಳೂರು-560 001.
E-mail ID: icpssarakar@gmail.com Ph.No.080-22879382

ಸಂ:ಐಸಿಪಿಎಸ್/ದತ್ತು-17/ಇತರೆ ಕಡತ ದಿನಾಂಕ:27.02.2019

**ಸುತ್ತೋಲೆ**

ವಿಷಯ: ಮಕ್ಕಳ ಕಲ್ಯಾಣ ಸಮಿತಿಯಿಂದ ನೀಡುತ್ತಿರುವ ಆದೇಶಗಳಲ್ಲಿ ಜೆ.ಜೆ. ಬಾಲನ್ಯಾಯ ನಿಯಮದ ಅನ್ವಯ ನಿಗದಿತ ಫಾರಂಗಳನ್ನು ಬಳಸದಿರುವ ಕುರಿತು

* * * * *

ದತ್ತು ಅಧಿಸೂಚನೆ 2017 ಹಾಗು ಬಾಲನ್ಯಾಯ ನಿಯಮ-2016ರ ಅನ್ವಯ ನಿಗದಿಪಡಿಸಿದ ಫಾರಂನ್ನು ಮಕ್ಕಳ ಕಲ್ಯಾಣ ಸಮಿತಿಯವರು ಮಕ್ಕಳನ್ನು, ಸಂಸ್ಥೆಗೆ ದಾಖಲಿಸುವಾಗ, ಸಂಸ್ಥೆಯಿಂದ ವರ್ಗಾವಣೆ ಮಾಡುವಾಗ, ಪೋಷಕರಿಗೆ ಮರಳಿಸುವಾಗ ಮತ್ತು ಪರಿತ್ಯಕ್ತ / ಒಪ್ಪಿಸಲ್ಪಟ್ಟ ಮಕ್ಕಳ ದತ್ತು ಪ್ರಕ್ರಿಯೆಯ ನಂತರ ದತ್ತು ಮುಕ್ತ ಆದೇಶವನ್ನು ನೀಡಬೇಕಿರುತ್ತದೆ.

ಆದರೆ CARINGS Website ನಲ್ಲಿ SARA ದಿಂದ ಮನವಿಗಳನ್ನು ಪರಿಶೀಲಿಸಿ ಅಂಗೀಕರಿಸುವಾಗ ತಪ್ಪಾದ ಫಾರಂಗಳನ್ನು ಅಪ್ ಲೋಡ್ ಮಾಡಿರುವುದನ್ನು ಈ ಕೆಳಗಿನಂತೆ ಗಮನಿಸಲಾಗಿದೆ.

- ಕೆಲವು ಮಕ್ಕಳ ಕಲ್ಯಾಣ ಸಮಿತಿಯವರು ನಿಗದಿತ ಫಾರಂಗಳನ್ನು ಮೇಲ್ಕಾಣಿಸಿದ ಸಂದರ್ಭಗಳಲ್ಲಿ ಉಪಯೋಗಿಸದೆ ಕೇವಲ ಮಕ್ಕಳ ಕಲ್ಯಾಣ ಸಮಿತಿಯ Letter Head ನಲ್ಲಿ ಮಾತ್ರ ಆದೇಶ ನೀಡುತ್ತಿರುವುದು ಕಂಡು ಬಂದಿದೆ.
- ಕೆಲವು ಮಕ್ಕಳ ಕಲ್ಯಾಣ ಸಮಿತಿಯವರು ಕೇವಲ ನೋಟ್‌ಶೀಟ್‌ನಲ್ಲಿ ಮಾತ್ರ ಮನವಿಯನ್ನು ಅಂಗೀಕರಿಸುತ್ತಿದ್ದಾರೆ.
- ಕೆಲವು ಮಕ್ಕಳ ಕಲ್ಯಾಣ ಸಮಿತಿಯವರು ನಿರ್ದಿಷ್ಟ ಫಾರಂನನ್ನು ಹೊರತುಪಡಿಸಿ ಬೇರೊಂದು ಫಾರಂನನ್ನು ಉಪಯೋಗಿಸುತ್ತಿದ್ದಾರೆ.
- ದತ್ತು ಮುಕ್ತ ಆದೇಶವನ್ನು ನೀಡುವ ಸಂದರ್ಭದಲ್ಲಿ ಹಳೇಯ ಶೆಡ್ಯೂಲ್ ನ್ನು ಉಪಯೋಗಿಸುತ್ತಿದ್ದಾರೆ.
- ಮೇಲ್ಕಾಣಿಸಿದ ತಪ್ಪುಗಳು ಮಕ್ಕಳ ಕಲ್ಯಾಣ ಸಮಿತಿಯಿಂದಾಗುತ್ತಿರುವುದರಿಂದ ಮಕ್ಕಳನ್ನು ದತ್ತು ಪ್ರಕ್ರಿಯೆಯಲ್ಲಿ ತೊಡಗಿಸಲು ಅನಾವಶ್ಯಕವಾಗಿ ವಿಳಂಬವಾಗುತ್ತಿದೆ.

ಮೇಲ್ಕಂಡ ಅಂಶಗಳನ್ವಯ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿ ಈ ಕುರಿತು ಮಕ್ಕಳ ಕಡತ ಮಂಡಿಸುವಾಗ ದತ್ತು ಅಧಿಸೂಚನೆ-2017 ರಲ್ಲಿ ದತ್ತು ಮುಕ್ತ ಆದೇಶ ನೀಡಲು ನಿಗದಿಪಡಿಸಿದ ಶೆಡ್ಯೂಲ್ ಉಪಯೋಗಿಸುವುದು. ಉಳಿದಂತೆ ಬಾಲನ್ಯಾಯ ನಿಯಮಗಳು-2016ರಲ್ಲಿರುವ ಫಾರಂಗಳಲ್ಲಿಯೇ ಕಡ್ಡಾಯವಾಗಿ ಮಕ್ಕಳ ಕಲ್ಯಾಣ ಸಮಿತಿಯು ಆದೇಶ ನೀಡುವಂತೆ ನೋಡಿಕೊಳ್ಳಲು ಈ ಮೂಲಕ ಸೂಚಿಸಲಾಗಿದೆ.

ತಮ್ಮ ವಿಶ್ವಾಸಿ,

ನಿರ್ದೇಶಕರು, 2/3
ಸಮಗ್ರ ಮಕ್ಕಳ ರಕ್ಷಣಾ ಯೋಜನೆ
ಬೆಂಗಳೂರು.

ಪ್ರತಿಯನ್ನು:

1. ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು, ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಎಲ್ಲಾ ಜಿಲ್ಲೆಗಳು ಇವರ ಮಾಹಿತಿಗಾಗಿ ಮತ್ತು ಮುಂದಿನ ಕ್ರಮಕ್ಕಾಗಿ
2. ಅಧ್ಯಕ್ಷರು, ಮಕ್ಕಳ ಕಲ್ಯಾಣ ಸಮಿತಿ, ಎಲ್ಲಾ ಜಿಲ್ಲೆಗಳು ಇವರ ಮಾಹಿತಿಗಾಗಿ ಮತ್ತು ಮುಂದಿನ ಕ್ರಮಕ್ಕಾಗಿ
3. ಮುಖ್ಯಸ್ಥರು, ವಿಶೇಷ ದತ್ತು ಸಂಸ್ಥೆ, ಎಲ್ಲಾ ಜಿಲ್ಲೆಗಳು ಇವರ ಮಾಹಿತಿಗಾಗಿ ಮತ್ತು ಮುಂದಿನ ಕ್ರಮಕ್ಕಾಗಿ

Adoption 37/circular

Scanned by CamScanner